# ಬಸವಣ್ಣನ ಅವೈದಿಕ ಪ್ರಜ್ಞೆ: ಕನ್ನಡ ಬಸವ ಕಥನ & ವಚನಗಳಲ್ಲಿ

**ಮಹಾಲಿಂಗಪ್ರಭು**

ಸಹಾಯಕ ಪ್ರಧ್ಯಾಪಕರು, ಕನ್ನಡ ವಿಭಾಗ, ದಯಾನಂದ ಸಾಗರ್ ಬಿಸಿನೆಸ್ ಅಕಾಡೆಮಿ, ಬೆಂಗಳೂರು.

DOI: https://doi.org/10.5281/zenodo.15490921

## ABSTRACT:

ಕನ್ನಡ ಬಸವ ಕಥನಗಳು ವಚನಗಳೊಂದಿಗೆ ಹೊಂದಿರುವ ಅಂತರ್ ಸಂಬಂಧವನ್ನು ಜಪತಪ ತೀರ್ಥಕ್ಷೇತ್ರ, ಕರ್ಮ-ಪುನರ್ಜನ್ಮ, ಶಕುನಗಳು ಮೊದಲಾದ ತಾತ್ವಿಕ ಅಂಶಗಳ ಹಿನ್ನೆಲೆಯಲ್ಲಿ ವಿವಿಧ ನಿದರ್ಶನಗಳ ಆಧಾರದ ಮೇಲೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ. ಬಸವಣ್ಣ ಸಮಕಾಲೀನದಿಂದ ಟೀಕೆ-ವಿಮರ್ಶೆಗಳು ಎದುರಾದಾಗ ಬಸವಣ್ಣ ತನ್ನ ಲೋಪಗಳನ್ನು ಸರಿಪಡಿಸಿಕೊಂಡ ರೀತಿಯನ್ನೊಳಗೊಂಡ ಕನ್ನಡ ಬಸವ ಕಥನಗಳಲ್ಲಿ ಉಕ್ತವಾದ ಆತ್ಮಶೋಧನೆಯ ಪ್ರಸಂಗಗಳು-ವಚನಗಳು ಈ ರೀತಿಯಾಗಿ ಬಸವಣ್ಣನ ತಾತ್ವಿಕತೆ ಹಾಗೂ ವ್ಯಕ್ತಿಚಿತ್ರಣ ಎರಡೂ ವಿಷಯಗಳಿಗೆ ಸಂಬಂಧಿಸಿದ ಅಂಶಗಳನ್ನು ಈ ಲೇಖನದಲ್ಲು ವಿವಿಧ ಆಯಾಮಗಳಲ್ಲಿ ಪರಿಶೀಲಿಸಿವ ಕಾರ್ಯವನ್ನು ಮಾಡಲಾಗಿದೆ.

## KEYWORDS:

ಉಪನಯನ, ಏಣಿ-ಶ್ರೇಣಿ, ಬ್ರಹ್ಮಚರ್ಯ, ವ್ರತ ದೀಕ್ಷೆ, ಬ್ರಹ್ಮಕರ್ಮ, ವಿಕೇಂದ್ರೀಕರಣ.

ಕನ್ನಡ ಬಸವ ಕಥನಗಳು ಹಾಗೂ ವಚನ ಸಾಹಿತ್ಯದ ಮಧ್ಯೆ ತಾತ್ವಿಕ ಅಂಶಗಳ ಕೊಡುಕೊಳ್ಳುವಿಕೆಯ ರೀತಿಯಲ್ಲಿ ಉಂಟಾದ ಸಂಬಂಧವನ್ನು ಕೆಲವು ನಿದರ್ಶನಗಳ ಮೂಲಕ ಪರಿಶೀಲಿಸಲು ಶಕ್ಯವಿದೆ. ಭೀಮಕವಿಯ "ಬಸವ ಪುರಾಣ"ದಲ್ಲಿ ಮಾದರಸ ಮಾದಲಾಂಬಿಕೆಯರು ಬಸವಣ್ಣನಿಗೆ "ಉಪನಯನ" ಮಾಡಲು ನಿರ್ಧರಿಸಿದ ಸಂದರ್ಭದಲ್ಲಿ ವೈದಿಕ ವಿಚಾರದಾರೆಯ ಆಚರಣೆಗೆ ಬಸವಣ್ಣನಿಂದ ಮಾದರಸನಿಗೆ ತೀವ್ರ ಪ್ರತಿರೋಧ ಕಂಡು ಬರುತ್ತದೆ. ಉಪನಯನ ಆಚರಣೆಯ ಕುರಿತು ಮಾದಿರಾಜ ಹಾಗೂ ಬಸವಣ್ಣ ಇಬ್ಬರಲ್ಲಿಯೂ ವಾಗ್ವಾದ ಹೆಚ್ಚಾದಾಗ ಬಸವಣ್ಣ ಕೆಳಗಿನಂತೆ ಪ್ರಬಲ ಪ್ರತಿರೋಧವನ್ನು ತೋರುತ್ತಾನೆ.

**ಅಯ್ಯನಾರೆನಗವ್ವೆಯಾರ್ ಹಿರಿಯಯ್ಯ**
**ನಾರ್ ನೀನೆಲ್ಲಿಯವ ನಿ**
**ನ್ನಯತನವೇತಕ್ಕೆ ಸುಡುಶಿವಭಕ್ತಿ ಹೀನರಿರ**
**ಅಯ್ಯನಯ್ಯನು ಚೆನ್ನಯ್ಯಂ ಚಿ**
**ಕ್ಕಯ್ಯ ಕಕ್ಕಯ್ಯನು ತೆಲುಗು ಜೊ**
**ಮ್ಮಯ್ಯನಯ್ಯನು ನಿಂಬಿ ತಾಯ್ "ಚೇರಮನ ಮಗ ನಾನು"**

ಎಂಬುವುದರಲ್ಲಿ "ಉಪನಯನ"ಕ್ಕೆ ಸ್ಪಷ್ಟ ಪ್ರತಿರೋಧ ಕಂಡು ಬರುತ್ತದೆ. ಆಳದಲ್ಲಿ ಹುಟ್ಟಿನ ಆಧಾರದ ಮೇಲಿನ ಸಾಮಾಜಿಕ ಅಸಮಾನತೆಯನ್ನು ಮೀರುವ ಭಾವವುಳ್ಳವನಾಗಿದ್ದ ಬಸವಣ್ಣ ಏಣಿ–ಶ್ರೇಣಿ ಆಧಾರಿತ ಉಪನಯನ ಸಂಸ್ಕಾರವನ್ನು ನಿರಾಕರಿಸಿದ ಪ್ರಸಂಗ ಆತನ ವಿಚಾರಧಾರೆಯನ್ನು ಗಮನಿಸಿದಾಗ ಅತ್ಯಂತ ಸಹಜವಾಗಿ ಮೂಡಿ ಬಂದಿದೆ ಎಂಬುದು ನಮ್ಮ ಅರಿವಿಗೆ ಬರುತ್ತದೆ.

ಬಸವಣ್ಣ ನಿರಾಕರಿಸಿದ ಉಪನಯನದ ಆಚರಣು ಹಿನ್ನೆಲೆಯನ್ನು ಇಲ್ಲಿ ಸ್ಥೂಲವಾಗಿ ಪರಿಶೀಲಿಸುವುದು ಸೂಕ್ತ. ವೈದಿಕ ಆಚರಣೆಗಳಲ್ಲಿ ಒಂದಾದ ಉಪನಯನವು ತನ್ನ ಆಳದಲ್ಲಿಯೇ ಮೌಢ್ಯ ಹಾಗೂ ತಾರತಮ್ಯದ ಸಂಗತಿಗಳನ್ನು ಒಳಗೊಂಡಿರುವುದು ಸ್ಪಷ್ಟ. ಉಪನಯನ ಎಂದರೆ ಆಚಾರ್ಯರ ಸಮೀಪಕ್ಕೆ ಉಪದೇಶಕ್ಕಾಗಿ ಆಗಮಿಸುವುದು ಎಂದರ್ಥ. ಇದರಲ್ಲಿ ಮುಖ್ಯವಾದುದು ಗಾಯತ್ರಿ ಮಂತ್ರೋಪದೇಶ ಮತ್ತು ಬ್ರಹ್ಮಚರ್ಯ ವ್ರತ ದೀಕ್ಷೆ. ಬ್ರಾಹ್ಮಣ, ಕ್ಷತ್ರೀಯ ಮತ್ತು ವೈಶ್ಯರು ಈ ತ್ರಿವರ್ಣದವರಿಗೆ ಮಾತ್ರ ಈ ಸಂಸ್ಕಾರವುಂಟು. ಅಲ್ಲದೇ ವಟುವಿನ ವಯಸ್ಸನ್ನು ಮೂರು ವರ್ಣದವರಿಗೆ ಭಿನ್ನವಾಗಿ ಸೂಚಿಸಲಾಗಿರುವುದು. ಈ ಸಂಗತಿಗಳಿಂದ ಸ್ಪಷ್ಟವಾಗಿ ವರ್ಣ ತಾರತಮ್ಯ ಹಾಗೂ ಸಾಮಾಜಿಕ ಏಣಿಶ್ರೇಣಿಯನ್ನು ಸಮರ್ಥಿಸುವ ಆಚರಣೆಯಾಗಿ ಇದುಕಂಡು ಬರುತ್ತದೆ.

ಉಪನಯನದಿಂದ ಎರಡನೆಯ ಜನ್ಮ ಪ್ರಾಪ್ತವಾಗುವುದೆಂಬ, ಅಂದೆ ಬಾಲಕ ದ್ವಜನಾಗುವನೆಂಬ ಅಭಿಪ್ರಾಯವಿದೆ. ಮನುಸ್ಮೃತಿಯಲ್ಲಿ ಉಕ್ತವಾದ ವಿಚಾರಗಳಿಂದ ಉಪನಯನದ ಆಚರಣೆಯ ವಿಚಾರ ನಮಗೆ ಸ್ಪಷ್ಟವಾಗಿ ಅರವಿಗೆ ಬರುತ್ತದೆ.

**ಗರ್ಭಾಷ್ಟಮೇಬ್ದೇ ಕುರ್ವಿತ ಬ್ರಾಹ್ಮಣಸ್ಯೋಪನಾಯನಂ।**
**ಗರ್ಭಾದೇಕಾದಶೇ ರಾಜ್ಞೋ ಗರ್ಭಾತ್ತು ದ್ವಾದಶೇ ವಿಶಃ॥**

ಬ್ರಾಹ್ಮಣನಿಗೆ ಎಂಟನೆಯ ವರ್ಷದಲ್ಲಿ ಉಪನಯನ ಮಾಡಬೇಕು. ಕ್ಷತ್ರಿಯನಿಗೆ ಹನ್ನೊಂದನೆಯ ವರ್ಷದಲ್ಲಿ ಉಪನಯನವನ್ನು ಮಾಡಿಸಬೇಕು. ವೈಶ್ಯನು ಹನ್ನೆರಡನೆಯ ವರ್ಷದಲ್ಲಿ ಉಪನಯನವನ್ನು ಮಾಡಿಸಿಕೊಳ್ಳಬೇಕು ಎಂಬ ಉಲ್ಲೇಖ ಮನಸ್ಮೃತಿಯಲ್ಲಿ ಇದೆ. ಗಣನೀಯ ಸಂಗತಿ ಎಂದರೆ ತ್ರಿವರ್ಣವನ್ನು ಹೊರತುಪಡಿಸಿ ಶೂದ್ರರಿಗೆ ಈ ಸಂಸ್ಕಾರದ ಅವಕಾಶವಿಲ್ಲ. ವಿದ್ಯಾರ್ಜನೆ ಕುರಿತಾದ ಈ ಸಂಸ್ಕಾರದಿಂದ ವಂಚಿತರಾಗಿಸುವ ಮೂಲಕ ಅವರನ್ನು ವಿದ್ಯಾಭ್ಯಾಸದಿಂದಲೂ ದೂರವಿಡಲಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಬ್ರಾಹ್ಮಣನಿಗೆ ಹುಟ್ಟಿ ಹದಿನಾರು ವರ್ಷದವರೆಗೆ, ಕ್ಷತ್ರೀಯನಿಗೆ ಇಪ್ಪತ್ತೆರಡು ವರ್ಷದವರೆಗೆ, ವೈಶಯನಿಗೆ ಇಪ್ಪತ್ನಾಲ್ಕು ವರ್ಷದವರೆಗೆ ಉಪನಯನ ಮಾಡಿಕೊಳ್ಳಲು ಅಧಿಕಾರವಿರುತದೆ ಎಂದು ಮನುಸ್ಮೃತಿಯು ತಿಳಿಸುತ್ತದೆ.

**ಆತ ಊರ್ಧ್ವಂ ತ್ರಯೋಪ್ಯೇತೆ ಯಥಾಕಾಲಮಸಂಸಕರುತಾಃ|**
**ಸಾವಿತ್ರೀಪತಿತಾ ವ್ರಾತ್ಯಾ ಭವಂತಾರ್ಯವಿಗರ್ಹಿತಾಃ||**

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಹೇಳಿದ ಕಾಲದಲ್ಲೂ ಉಪನಯನ ಮಾಡದಿದ್ದ ಪಕ್ಷದಲ್ಲಿ, ಗಾಯತ್ರಿ ಉಪದೇಶ ಹೊಂದದಿದ್ದ ಪಕ್ಷದಲ್ಲಿ ಕುಲಶ್ರೇಷ್ಠರಿಂದ ತಿರಸ್ಕೃತರಾಗಿ ವ್ರಾತ್ಯರು (ಶೂದ್ರ) ಎನಿಸಿಕೊಳ್ಳುತ್ತಾರೆ ಎಂಬುದು ಇಲ್ಲಿಯ ಅಭಿಪ್ರಾಯ. ಉಪನಯನ ಸಂಸ್ಕಾರದ ಆಧಾರದ ಮೇಲೆ ನಿರ್ಧರಿಸಲ್ಪಡುವಂತಹ ಸಾಮಾಜಿಕ ಏಣಿ-ಶ್ರೇಣಿಯು ಇಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಈ ನಿಟ್ಟಿನಲ್ಲಿ ಉಪನಯನವು ಮನುಷ್ಯನನ್ನು ತಾರತಮ್ಯದ ಬಂಧನದಲ್ಲಿ ಸಿಲುಕಿಸುವ ಆಚರಣೆಯಾಗಿದೆ ಎಂಬುದು ಅರಿವಿಗೆ ಬರುತ್ತದೆ.

ಈ ಅಂಶಗಳನ್ನು ಗಮನಿಸಿದಾಗ ವರ್ಣ ವ್ಯವಸ್ಥೆಯನ್ನು ಒಪ್ಪಿ ತನ್ನನ್ನು ತಾನು ನಿರ್ದಿಷ್ಟ ವ್ಯವಸ್ಥೆಗೆ ಸೀಮಿತಪಡಿಸಿಕೊಳ್ಳಲು ಒಪ್ಪದ ಬಸವಣ್ಣನು ಈ ಉಪನಯನ ಆಚರಣೆಯನ್ನು ನಿರಾಕರಿಸಿದ ಭೀಮಕವಿಯ ಬಸವ ಪುರಾಣದಲ್ಲಿ ಉಕ್ತವಾದ ಘಟನೆ ಆತನ ವ್ಯಕ್ತಿತ್ವ ಹಾಗೂ ಆತನ ವೈಚಾರಿಕ ನಿಲುವಿನ ಪ್ರತಿರೂಪವೇ ಆಗಿ ಕಂಡು ಬರುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ಸಂಗತಿ ಬಸವಣ್ಣನ ವಚನಗಳ ಮೂಲಕ ನಮಗೆ ಸ್ಪಷ್ಟವಾಗಿ ತಿಳಿದು ಬರುತ್ತದೆ.

**ಅಪ್ಪನು ನಮ್ಮ ಮಾದಾರ ಚೆನ್ನಯ್ಯ**
**ಬೊಪ್ಪನು ನಮ್ಮ ಡೋಹರ ಕಕ್ಕಯ್ಯ**
**ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ**
**ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ**
**ಎನ್ನನೇತಕ್ಕರಿಯಿರಿ ಕೂಡಲಸಂಗಯ್ಯ?**

ಎಂಬ ವಚನದಲ್ಲಿಯೂ ಬಸವಣ್ಣನಿಂದ ವೈದಿಕತೆಗೆ ಸ್ಪಷ್ಟ ಪ್ರತಿರೋಧದ ಅಂಶ ಕಂಡು ಬರುತ್ತದೆ. ಈ ದೃಷ್ಟಿಯಿಂದ ವಚನ ಮೌಲ್ಯ ಕಾವ್ಯದಲ್ಲಿಯೂ ಪ್ರತಿಬಿಂಬಿವಾಗಿರುವುದನ್ನು ಗುರುತಿಸಬಹುದಾಗಿದೆ. ಅಲ್ಲದೇ ಸಾಮಾಜಿಕ ಏಣಿ-ಶ್ರೇಣಿಗೆ ಕಾರಣವಾಗಿದ್ದ ವರ್ಣ ಪ್ರಜ್ಞೆಯನ್ನು ಮೀರಿದ ದ್ಯೋಶಕವಾಗಿ ಇಲ್ಲಿಯ ಸನ್ನಿವೇಶ ಕಂಡು ಬರುತ್ತದೆ ಅನುಮಾನವಾಗಿ ವರ್ಣ ವ್ಯವಸ್ಥೆಯ ಹೆಸರಿನಲ್ಲಿ ಸ್ಥಾಪಿಸಿಕೊಂಡು ಬರಲಾಗಿದ್ದ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ತಮ್ಮನ್ನು ಅಪವರ್ಗೀಕರಣಗೊಳಿಸಿಕೊಳ್ಳುವ ಮೂಲಕ ಶ್ರೇಣೀಕರಣವನ್ನು ಮೀರಲು ಪ್ರಯತ್ನಿಸಿದ್ದನ್ನು ಭೀಮಕವಿಯ ಬಸವ ಪುರಾಣದ ಭಾಗ ಮತ್ತು ಅವರ ವಚನಗಳು ಪುಷ್ಟೀಕರಿಸುತ್ತವೆ ಎಂಬುವುದರಲ್ಲಿ ಎರಡು ಮಾತಿಲ್ಲ.

ಭೀಮಕವಿಯ ಬಸವ ಪುರಾಣವಷ್ಟೇ ಅಲ್ಲದೇ ಅದರ ನಂತರದ ಕಾಲಘಟ್ಟದಲ್ಲಿ ರಚನೆಯಾದ ಗರಣಿಯ ಬಸವಲಿಂಗನ ಬಸವೇಶ್ವರ ಕಾವ್ಯದಲ್ಲಿಯೂ

ಸಹ ಬಸವಣ್ಣ ಯಾವುದೇ ವರ್ಣ ಜಾತಿಗಳ, ಭಾಷಾ ಗಡಿಗಳ ಭೇದವಿಲ್ಲದೆ ಎಲ್ಲರನ್ನು ತನ್ನವರನ್ನಾಗಿ ಹೇಳಿಕೊಂಡಿರುವ ಸಂಗತಿ ಕಂಡು ಬರುತ್ತದೆ.

**ಕುಲವಂತ ಮಾದಯ್ಯ ಕೆಲಸಾರು ಹಿಂದಕೆ।**
**ಕುಲರಹಿತನು ನಾನು ಬಸವ**
**ಕುಲವಂತ ಚೆನ್ನಯ್ಯನೊಲುಮೆಯ ಮಗ ನಾನು।**
**ತೆಲುಗ ಜೊಮ್ಮಯ್ಯನೆಮ್ಮಯ್ಯ**

ಎಂಬ ಮಾತಿನಲ್ಲಿ ಬಸವಣ್ಣ ಸಮಾಜವನ್ನೇ ತನ್ನ ಕುಟುಂಬದ ರೀತಿಯಲ್ಲಿ ಕಾಣುವ ಭಾವವು ಅಭಿವ್ಯಕ್ತಗೊಂಡಿದೆ. ಇದರಿಂದ ಆತನು ಸಾಮಾಜಿಕ ಸಾಮರಸ್ಯಕ್ಕೆ ನೀಡುತ್ತಿದ್ದ ಮಹತ್ವದ ಅರಿವು ನಮಗಾಗುತ್ತದೆ. ಅಲ್ಲದೇ ಆತನಲ್ಲಿ ಇದ್ದಂತಹ ಸಾಮಾಜಿಕ ಏಣಿಶ್ರೇಣಿಯನ್ನು ಮೀರುವ ಭಾವ ನಮ್ಮ ಗಮನಕ್ಕೆ ಬರುತ್ತದೆ.

**ಅಯ್ಯ ನನಗೆ ವೇಮಯ್ಯ ಚೇರಮ ಕಕ್ಕಯ್ಯ । ಚಿಕ್ಕಯ್ಯ ದೊಡ್ಡಯ್ಯನೆಮ್ಮಯ್ಯ**
**ಅಯ್ಯನೆನಗೆ ಗೊಲ್ಲಾಳಯ್ಯನು ಮೊದಲಾ । ದಯ್ಯಗಳುಂಟು**

ಎಂಬ ಗರಣಿಯ ಬಸವಲಿಂಗನ ಕಾವ್ಯ ದಲ್ಲಿ ಉಕ್ತವಗಿರುವ ಸಂಗತಿಯ ಮೂಲಕ ಎಲ್ಲರನ್ನು ತನ್ನ ತಂದೆ, ತಾಯಿ ಬಂಧು ಬಳಗವೆಂದು ಬಸವಣ್ಣ ಹೇಳಿಕೊಳ್ಳುವಂಥದ್ದು ಆತನ ಉದಾತ್ತ ಪ್ರವೃತ್ತಿಗೆ ಸಾಕ್ಷಿಯಾಗಿದೆ. ಆತನ ವಚನಗಳಲ್ಲಿರುವ ಈ ಬಗೆಯ ಪ್ರಗತಿಪರ ನಿಲುವಿಗಳು ಆತನ ಕುರಿತು ರಚನೆಯಾಗಿರುವ ವಿವಿಧ ಕಥನಗಳಲ್ಲೂ ಒಡಮೂಡಿರುವುದು ಸ್ಪಷ್ಟ.

ಬಸವಣ್ಣನ ತಂದೆ ಮಾದಿರಾಜನು ಆತನಿಗೆ ಉಪನಯನ ಸಂಸ್ಕಾರವನ್ನು ಮಾಡಲು ಮುಂದಾದಾಗ ಅದನ್ನು ನೆರವೇರಿಸಲು ಬಂದ ಪುರೋಹಿತರು ಹಾಗೂ ಬಸವಣ್ಣನ ಮಧ್ಯೆ ಉಪನಯನದ ಔಚಿತ್ಯ ಹಾಗೂ ವೈದಿಕ ವಿಚಾರಧಾರೆಯ ಇತರ ವಿಚಾರಗಳ ಕುರಿತು ಕೊಡೊಕೊಳ್ಳುವುಕೆ ನಡೆದ ಸಂಗತಿ ಕಂಡು ಬರುತ್ತದೆ. ವೈದಿಕ ಆಲೋಚನೆಯ ಕುಟಿಲತೆಗಳನ್ನು ಕುರಿತು ಬಸವಣ್ಣ ಹಲವು ಪೌರಾಣಿಕ ಸಂಗತಿಗಳ ನಿದರ್ಶನಗಳನ್ನು ತಮ್ಮ ಒಂದು ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

**ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ**
**ಗೌತಮ ಮುನಿಗೆ ಗೋವಧಯಾಯಿತ್ತು**
**ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ**
**ಬಲಿಗೆ ಬಂಧನವಾಯಿತ್ತು**
**ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ**
**ಕರ್ಣನ ಕವಚ ಹೋಯಿತ್ತು.**

ವೈದಿಕ ಪುರೋಹಿತ ಶಾಹಿ ವ್ಯವಸ್ಥಯು ಮುಗ್ಧರನ್ನು ತಂತ್ರಗಾರಿಕೆಯ ಮೂಲಕ ಹೇಗೆ ತನ್ನ ಜಾಲಕ್ಕೆ ಸಿಲುಕಿಸಿತ್ತು ಎಂಬುದನ್ನು ಪ್ರಸ್ತುತ ವಚನದಲ್ಲಿ ಬಸವಣ್ಣ ವಿವರಿಸಿದ್ದಾರೆ. ಇದರ ಪ್ರಭಾವ ಕವಿಕಾಡನ ಬಸವ ಶಿಖಾಮಣಿಯ ಮೇಲೆ

ಉಂಟಾಗಿರುವುದು ತಿಳಿದು ಬರುತ್ತದೆ.

ಮಾದಿರಾಜನು ಬಸವಣ್ಣನಿಗೆ ಉಪನಯನ ಸಂಸ್ಕಾರವನ್ನು ಮಾಡಲು ಮುಂದಾದಾಗ ಅದನ್ನು ಬಸವಣ್ಣನು ಒಪ್ಪದೇ ಮನೆಯನ್ನು ತೊರೆದು ಹೋಗಲು ನಿರ್ಧರಿಸಿದ್ದನು. ಆ ಸಂಧರ್ಭದಲ್ಲಿ ಪುರೋಹಿತನು ಬಸವಣ್ಣನನ್ನು ಕುರಿತು ಬ್ರಾಹ್ಮಣ ವರ್ಣದಲ್ಲಿ ಜನಿಸಿ, ಬ್ರಹ್ಮೋಪದೇಶವನ್ನು ಪಡೆದು, ಬ್ರಹ್ಮಕರ್ಮಗಳನ್ನು, ನಿತ್ಯ ನಿಯಮಗಳನ್ನು ಮಾಡಿದರೆ ಬ್ರಾಹ್ಮಣನೆನೆಸುವೆ ಎಂದು ಉಪದೇಶಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಬಸವಣ್ಣ ಪೌರಾಣಿಕ ಸಂಗತಿಗಳ ವಿವರಗಳ ಮೂಲಕ ಪುರೋಹಿತಶಾಹಿ ವ್ಯವಸ್ಥೆಯ ಕುಟಿಲತೆಗಳ ಕುರಿತು ಪ್ರಸ್ತಾಪಿಸಿ ಉತ್ತರ ನೀಡುತ್ತಾನೆ.

**ಹಿಂದೆ ಬಲೀಂದ್ರ ಬ್ರಾಹ್ಮಾಣನೆನ್ನೆಯ ದೇವ।**
**ರೆಂದು ನಂಬಿರೆ ಬ್ರಾಹ್ಮಣನೆ**
**ಬಂದು ಮೂರಡಿ ಭೂಮಿಯ ಕೇಳಿ ಕೊಟ್ಟೊಡೆ।**
**ಬಂಧನಕೊಳಗು ಮಾಡಿದನು**

**ಭುವನದೊಳ್ ವಿಷ್ಣು ಬ್ರಾಹ್ಮಣನಾಗಿ ಕರ್ಣನ।**
**ಕವಚವ ಬೇಡಿ ಕಪಟದಿ**
**ಅವನ ಪ್ರಾಣವ ಕೊಂದ ಅತಿದ್ರೋಹಿಗಳೆಂದು।**
**ಶಿವಭಕ್ತ ಬಸವ ತಾ ಜರೆದ.**

ಬ್ರಾಹ್ಮಣನನ್ನೇ ದೈವವೆಂದು ನಂಬಿದ್ದ ಬಲೀಂದ್ರನಿಗೆ ಬ್ರಾಹ್ಮಣ ಬಂದು ಕೇಳಿದ್ದಕ್ಕೆ ಭೂಮಿಯನ್ನೇ ಕೊಟ್ಟಿದ್ದರೂ ಆತನನ್ನು ಬಂಧನಕ್ಕೊಳಪಡಿಸಿದ್ದು, ವಿಷ್ಣುವು ಬ್ರಾಹ್ಮಣ ವೇಷದಲ್ಲಿ ಬಂದು ಕರ್ಣನ ಕವಚವನ್ನು ಬೇಡಿ ಆತನ ಪ್ರಾಣಕ್ಕೆ ಕುತ್ತು ತಂದ ಸಂಗತಿಗಳನ್ನು ಪ್ರಸ್ತಾಪಿಸಿ ಪುರೋಹಿತಶಾಹಿ ವ್ಯವಸ್ಥೆಯ ತಂತ್ರಗಾರಿಕೆಗಳನ್ನು ಟೀಕಿಸಿ ಉಪನಯನವನ್ನು ನಿರಾಕರಿಸುತ್ತಾನೆ. ಈ ಸಂಗತಿಗಳು ಈಗಾಗಲೇ ಉಲ್ಲೇಖಿಸಿದಂತೆ ಬಸವಣ್ಣನ ವಚನವೊಂದರಲ್ಲಿ ಉಲ್ಲೇಖಿತವಾಗಿರುವುದರಿಂದ ಅದರ ಪ್ರಭಾವ ಕವಿ ಕಾಡನ ಇಲ್ಲಿಯ ನಿರೂಪಣೆಯ ಮೇಲೂ ಆಗಿದೆ ಎಂಬುದು ತಿಳಿದು ಬರುತ್ತದೆ.

ವರ್ಣ ಹಾಗೂ ವರ್ಗ ಪ್ರಜ್ಞೆಗಳೆರಡೂ ಪ್ರಾಚೀನ ಕಾಳಘಟ್ಟದಲ್ಲಿ ಅಸಹಾಯಕರ ಶೋಷಣೆಗೆ ಕಾರಣವಾಗಿದ್ದ ಪ್ರಭುತ್ವದ ಎರಡು ಆಯಾಮಗಳಾಗಿದ್ದವು ಎಂಬುವುದರಲ್ಲಿ ಎರಡು ಮಾತಿಲ್ಲ. ವರ್ಣ ಪ್ರಜ್ಞೆಯು ಪುರೋಹಿತಶಾಹಿ ವ್ಯವಸ್ಥೆಯನ್ನು ಪ್ರತಿನಿಧಿಸಿದರೆ, ವರ್ಗವ್ಯವಸ್ಥೆಯು ರಾಜ ಪ್ರಭುತ್ವವನ್ನು ಪ್ರತಿನಿಧಿಸುತ್ತಿತ್ತು. ವರ್ಣ ಹಾಗೂ ವರ್ಗ ವ್ಯವಸ್ಥೆಗಳು ಸಮಾನಾಂತರವಾಗಿ ಅಸ್ತಿತ್ವದಲ್ಲಿದ್ದು ಒಂದಕ್ಕೊಂದು ಪೂರಕವಾಗಿ ಕಾರ್ಯ ಮಾಡುತ್ತಿದ್ದವು.

ಬಿಜ್ಜಳ "ನಿಮ್ಮನ್ನು ನಂಬಿ ಭಂಡಾರದ ಹೊಣೆಯನ್ನು ಕೊಟ್ಟರೆ ಹೀಗೆ ಮಾಡಬಹುದೆ? ಎಲ್ಲವನ್ನೂ ಶಿವಭಕ್ತರಿಗೆ ಕೊಟ್ಟು ರಾಜ್ಯವನ್ನು ಮುಳುಗಿಸುತ್ತಾರೆಯೇ ಏನಾದರಾಗಲಿ ಈಗಿಂದೀಗಲೆ ಆ ಹೊನ್ನನ್ನು ಹಿಂದಿರುಗಿಸಬೇಕು ಎಂದು ಕಠಿಣವಾಗಿ ನುಡಿದ. ಪರ ಧರ್ಮದವರ ಚಾಡಿ ಮಾತು ದೊರೆಯ ಮನಸ್ಸನ್ನು ಕೆಡಿಸಿದೆ ಎಂದು ಮನಸ್ಸಿನಲ್ಲೇ ಅಂದುಕೊಂಡ ಬಸವಣ್ಣ ಬಿಜ್ಜಳನಿಗೆ ಈ ರೀತಿ ಪ್ರತಿಕ್ರಿಯಿಸುತ್ತಾನೆ.

**ಸಜ್ಜನರನರಿಯದ ಬಿಜ್ಜಳ ಭೂಪ**
**ಉದಧಿ ನದಿಯ ನೀರಂ ಸೀವುದೆ?**
**ಭಾಸ್ಕರಂ ಕನ್ನಡಿಯ ಬೆಳಕಂ ಪಾರ್ವನೆ?**
**ಶಿವಭಕ್ತರು ನಿನ್ನೊಡವೆಗಾಸೆಯ ಮಾಳ್ಪರೆ?**
**ತಮ್ಮೊಡವೆಯಂ ತಾವು ಕೊಂಡರು.**

ಎಂದು ಬಿಜ್ಜಳನಿಗೆ ಪ್ರತಿಕ್ರಿಯೆಯಾಗಿ ನೇರವಾಗಿ ಹೇಳುವುದು ಕಂಡು ಬರುತ್ತದೆ. ಅಲ್ಲದೇ ಭಂಡಾರದ ಪೆಟ್ಟಿಗೆಯನ್ನು ತೆಗೆದು ತೋರಿಸಿದಾಗ ಲೆಕ್ಕದಲ್ಲಿ ವ್ಯತ್ಯಾಸ ಕಂಡು ಬಂದ ಹದಿನೆಂಟು ಕೋಟಿಗೆ ಬದಲಾಗಿ ಮೂವತ್ತಾರು, ಎಪ್ಪತ್ತೆಂಟು ಕೋಟಿಗಿಂತ ಸಂಪತ್ತು ಮಿಗಿಲಾಗಿ ಗಣಕರು ಲೆಕ್ಕ ಮಾಡಲಾಗದೆ ಸೋತು ಹೋದದರಿಂದ ಬಿಜ್ಜಳ ನಾಚಿಕೆಯಿಂದ ತಲೆತಗ್ಗಿಸಿದ್ದು ಕಂಡು ಬರುತ್ತದೆ. ಬಸವಣ್ಣ ಮುಂದುವರೆದು ಬಿಜ್ಜಳನಿಗೆ ಇನ್ನಷ್ಟು ಪ್ರತಿರೋಧವನ್ನು ಒಡ್ಡಿ ಖಂಡಿಸುವ ಸಂಗತಿ ಉಕ್ತವಾಗಿದೆ.

ಅಲ್ಲದೇ ಬಸವರಾಜದೇವರ ರಗಳೆಯಲ್ಲಿ ಸಂಗಮನಾಥನ ಪ್ರೇರಣೆಯಿಂದ ಬಸವಣ್ಣನು ಮಂಗಳಿವೇಡೆಗೆ ಹೋದಂತಹ ಪ್ರಸಂಗ ಕಂಡು ಬರುತ್ತದೆ. ಆ ಸಂದರ್ಭದಲ್ಲಿ ಬಸವಣ್ಣ ಆಡುವ ಮಾತುಗಳು ಇಲ್ಲಿ ಉಲ್ಲೇಖನೀಯವಾದವುಗಳು.

**ಅನುಪಮಶಿವೈಕಸಮ್ಯಗ್ಜ್ಞಾನಿ ಕಡುಮಾನಿ**
**ಅಕ್ಷರಜ್ಞಾನಮುಂಟದನೈದೆ ಮಾರುವೆಂ**
**ತ್ರ್ಯಕ್ಷನುಣುಗರ್ಗಾದ ಹೊಂಗಳಂ ಬೀರುವೆಂ**
**ಅವರ ಪ್ರಸಾದಮಂ ನಲವಿಂದ ತಾಳುವೆಂ**
**ಅವರ ಕಾರುಣ್ಯ ರಸದೊಳೋಲಾಡುವೆಂ.**

ಮಂಗಳಿವೇಡೆಗೆ ಹೋಗುವ ತನ್ನ ಕಾರ್ಯೋದ್ದೇಸವನ್ನು ಬಸವಣ್ಣ ಸ್ಪಷ್ಟಪಡಿಸುತ್ತಾನೆ. ತನ್ನ ಅಕ್ಷರ ಜ್ಞಾನದಿಂದ ಸಂಪಾದಿಸಿದ್ದರಲ್ಲಿಯೇ ಸಮಾಜಕ್ಕೆ ದಾಸೋಹದ ರೂಪದಲ್ಲಿ ನೀಡುವ ಉದ್ದೇಶವನ್ನು ಹೊಂದಿರುವುದನ್ನು ಸ್ಪಷ್ಟಪಡಿಸುತ್ತಾನೆ. ಬಸವಣ್ಣನ ವಚನಗಳಲ್ಲಿ ಉಲ್ಲೇಖಿತವಾಗಿರುವ ದಾಸೋಹ ಸಿದ್ಧಾಂತ ಆಧುನಿಕ ಸಂದರ್ಭದಲ್ಲಿ ಬಳಕೆಯಾಗುತ್ತಿರುವ ಸಂಪತ್ತಿನ ವಿಕೇಂದ್ರೀಕರಣ ಸಿದ್ಧಾಂತದ ಮೂಲ ಸ್ವರೂಪದಂತಿರುವುದು ಸ್ಪಷ್ಟ. ಆ ಬಗೆಯ ವಚನ ಮೌಲ್ಯದ ವಿಚಾರ ಇಲ್ಲಿ ಪ್ರತಿಪಾದಿತವಾಗಿರುವುದು ಕಂಡು ಬರುತ್ತದೆ. ಈ ಎಲ್ಲ ಸಂಗತಿಗಳನ್ನು

ಗಮನಿಸಿದಾಗ ಬಸವಣ್ಣ ಭಂಡಾರದ ಸಂಪತ್ತನ್ನು ಅಪವ್ಯಯ ಮಾಡಿದಂತೆ ಆರೋಪಿಸಿರುವ ಸಂಗತಿಯಲ್ಲಿ ವಾಸ್ತವಾಂಶದ ಸಾಧ್ಯತೆ ಇಲ್ಲವೆಂಬುದ ವೇದ್ಯವಾಗುತ್ತದೆ ಹಾಗೂ ಭಂಡಾರದ ಸಂಪ್ತತ್ತು ಅಗಣಿತವಾಗಿ ಹೆಚ್ಚಿತೆಂದು ಚಿತ್ರಿಸಿರುವ ಸಂಗತಿ ಬಸವಣ್ಣನನ್ನು ದೈವತ್ವದ ನೆಲೆಯಲ್ಲಿ ಚಿತ್ರಣ ಮಾಡಲು ಕವಿಯು ಉತ್ಪ್ರೇಕ್ಷೆಯುಂಟು ಮಾಡುವ ವಿಚಾರಗಳನ್ನು ಕೃತಿಯಲ್ಲಿ ಅಳವಡಿಸಿರುವ ಸಾಧ್ಯತೆ ಕಂಡು ಬರುತ್ತದೆ. ಈ ನೆಲೆಯಲ್ಲಿ ಬಸವಣ್ಣನಿಗೆ ಪ್ರಭುತ್ವದೊಂದಿಗೆ ಮುಕ್ತ ಪ್ರತಿರೋಧವನ್ನು ತೋರುವ ಅವಕಾಶವು ಇತ್ತೆಂಬುದು ತಿಳಿದು ಬರುತ್ತದೆ.

ಕ್ರಿ.ಶ. 1650ರ ಸುಮಾರಿನಲ್ಲಿದ್ದವನೆಂದು ಗುರುತಿಸಲಾದ ಅದೃಶ್ಯ ಕವಿಯ "ಬಸವಪವಾಡ" ಎಂಬ ಕೃತಿಯಲ್ಲಿ ಮೂಡಿ ಬಂದ ಈ ಸನ್ನಿವೇಶವನ್ನು ತುಲನಿಸಿ ನೋಡಿದಾಗ ಸಂವಾದಿಯಾದ ಸಂಗತಿ ಕಂಡು ಬರುತ್ತದೆ.

**ಬಂದ ಬಸವರಾಜ ಭವರೋಗ ಹರಕೃಪಾ**
**ಸಿಂಧು ಬಿಜ್ಜಳನ ವೋಲಗಕೆ**
**ಸಂದಣಿ ಶರಣರು ಸಹವಾಗಿ ನಡೆತಂದು**
**ನಂದಿಯುಂಗುರಕೆರಗಿದನು.**

ಬಸವಣ್ಣನು ಅರಸನಿಗೆ ನಮಿಸದೆ ನಂದಿಯುಂಗರಕ್ಕೆ ನಮಿಸಿದನು ಎಂದು ಕೊಂಡೆಯರು ದೂರಿದಾಗ ಬಿಜ್ಜಳನು ಬಸವಣ್ಣನ ಮೇಲೆ ಸಂದೇಹಪಟ್ಟು ಉಂಗುರವನ್ನು ತೆಗೆದು ತನಗೆ ನಮಿಸಲು ಹೇಳಿದಾಗ ಸಿಂಹಾಸನ ಸುಟ್ಟು ಬೂದಿಯಾಗುವುದು, ಬಸವನನ್ನು ಸಂದೇಹಿಸಿದ್ದಕ್ಕಾಗಿ ಬಿಜ್ಜಳನು ಖೇದ ವ್ಯಕ್ತಪಡಿಸಿದ್ದು ಅಲ್ಲಿನ ಕಾವ್ಯ ಭಾಗದಲ್ಲಿ ಉಕ್ತವಾಗಿರುವುದನ್ನು ಕಾಣಬಹುದು.

**ಕೊಂಡೆಯ ಮಂಚಿಯ ನುಡಿಗೇಳಿ ನಾವಿಂದು**
**ಬಂಡಾದೆವು ಲೋಕದೊಳಗೆ**
**ದಂಡನಾಯಕ ಸಲಹೆಂದು ಬಿಜ್ಜಳರಾಯ**
**ಮಂಡಿಸಿ ಕರಗಳ ಮುಗಿದ.**

ಕವಿ ಕಾಡನ "ಬಸವ ಶಿಕಾಮಣಿ" ಹಾಗೂ ಅದೃಶ್ಯ ಕವಿಯ "ಬಸವ ಪವಾಡ" ಕೃತಿಗಳೆರಡರಲ್ಲೂ ಬಿಜ್ಜಳನಿಗೆ ಬಸವಣ್ಣನಿಂದ ಸ್ಪಷ್ಟ ಪ್ರತಿರೋಧ ಉಂಟಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಪ್ರಭುತ್ವದ ಭಾಗವಾಗಿದ್ದು, ಅದರಿಂದ ಅಕಾರಣವಾಗಿ ಒತ್ತಡ, ಆರೋಪಗಳ ಬಂದಾಗ ಅದಕ್ಕೆ ಮಣಿಯದೆ ಬಸವಣ್ಣನು ಸ್ಪಷ್ಟ ಪ್ರತಿರೋಧವನ್ನು ತೋರಿದಾಂಶವನ್ನು ಕವಿ ಕಾಡನ 'ಬಸವ ಶಿಖಾಮಣಿ' ಹಾಗೂ 'ಬಸವ ಪವಾಡ' ದ ಈ ಸಂಗತಿಗಳ ಮೂಲಕ ಅರಿತುಕೊಳ್ಳಬಹುದಾಗಿದೆ.

**ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ**
**ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ**
**ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮಕುಟ**

**ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ**
**ಕೂಡಲಸಂಗಮದೇವಯ್ಯಾ**
**ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.**

ಪ್ರಸ್ತುತ ವಚನಗಳಲ್ಲಿ ತನ್ನ ಇಷ್ಟ ದೈವವಾದ ಕೂಡಲಸಂಗಮದೇವನನ್ನು ನೆನೆಯುತ್ತ ಆತನು ಸರ್ವಾಂತರ್ಯಾಮಿಯಾಗಿರುವ ಸ್ವರೂಪವನ್ನು ಕಟ್ಟಿಕೊಟ್ಟಿದ್ದಾನೆ. ಬೀಮಕವಿಯಂತೂ ತನ್ನ ಬಸವಪುರಾಣದಲ್ಲಿ ಬಸವಣ್ಣನಿಗೆ ದೈವತ್ವವನ್ನು ಆರೋಪಿದದು ಆ ಕೃತಿಯಲ್ಲಿ ಉಕ್ತ್ರಾದ ಹಲವು ಸಂಗತಿಗಳಿಂದ ವೇದ್ಯವಾಗುತ್ತದೆ. ಬಸವಣ್ಣನು ತನ್ನ ಇಷ್ಟದೈವವಾದ ಕೂಡಲಸಂಗಮದೇವನ ಮಹಿಮೆಯನ್ನು ಸಾರಿರುವುದು ಮೇಲಿನ ವಚನದ ಮೂಲಕ ಸ್ಪಷ್ಟವಾಘಿ ತಿಳಿದು ಬರುತ್ತದೆ.

ಕನ್ನಡ ಬಸವ ಕಥನಗಳು ವಚನಗಳೊಂದಿಗೆ ಹೊಂದಿರುವ ಅಂತರ್ ಸಂಬಂಧವನ್ನು ಜಪತಪ ತೀರ್ಥಕ್ಷೇತ್ರ, ಕರ್ಮ–ಪುನರ್ಜನ್ಯ, ಶಕುನಗಳು ಮೊದಲಾದ ತಾತ್ವಿಕ ಅಂಶಗಳ ಹಿನ್ನೆಲೆಯಲ್ಲಿ ವಿವಿಧ ನಿದರ್ಶನಗಳ ಆಧಾರದ ಮೇಲೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ. ಬಸವಣ್ಣ ಸಮಕಾಲೀನದಿಂದ ಟೀಕೆ–ವಿಮರ್ಶೆಗಳು ಎದುರಾದಾಗ ಬಸವಣ್ಣ ತನ್ನ ಲೋಪಗಳನ್ನು ಸರಿಪಡಿಸಿಕೊಂಡ ರೀತಿಯನ್ನೊಳಗೊಂಡ ಕನ್ನಡ ಬಸವ ಕಥನಗಳಲ್ಲಿ ಉಕ್ತವಾದ ಆತ್ಮಶೋಧನೆಯ ಪ್ರಸಂಗಗಳು–ವಚನಗಳು ಈ ರೀತಿಯಾಗಿ ಬಸವಣ್ಣನ ತಾತ್ವಿಕತೆ ಹಾಗೂ ವ್ಯಕ್ತಿಚಿತ್ರಣ ಎರಡೂ ವಿಷಯಗಳಿಗೆ ಸಂಬಂಧಿಸಿದ ಅಂಶಗಳನ್ನು ಈ ಲೇಖನದಲ್ಲು ವಿವಿಧ ಆಯಾಮಗಳಲ್ಲಿ ಪರಿಶೀಲಿಸಿವ ಕಾರ್ಯವನ್ನು ಮಾಡಲಾಗಿದೆ.

## ಪರಾಮರ್ಶನ ಗ್ರಂಥಗಳು:

1. ಕಲಬುರಗಿ ಎಂ.ಎಂ. (ಪ್ರ.ಸಂ.), (2016), ಬಸವಯುಗದ ವಚನ ಮಹಾಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.